ಆಕಸ್ಮಿಕ ಬೆಂಕಿ ಅನಾಹುತದಲ್ಲಿ ಮನೆ/ಗುಡಿಸಲು ಸುಟ್ಟು ಹೋದ ಫಲಾನುಭವಿಗಳಿಗೆ ಪರಿಹಾರ ವಿತರಣೆ ಮಾಡಿದ ವಿವರಗಳು – ಸಿಂಧನೂರು

2010–11

ಕ್ರಮ ಸಂಖ್ಯೆ	ಸಂತ್ರಸ್ತರ ಹೆಸರು		ಮೊತ್ತ
1	ಈರಪ್ಪ ತಂದೆ : ತಿಮ್ಮಯ್ಯ	ಸಾ : ಹರೇಟನೂರು	2000–00
2	ಭೀಮಣ್ಣ ತಂದೆ : ಹಿರೀನಾಗಪ್ಪ	ಸಾ : ಸಿಂಗಾಪುರ	2000–00
3	ಪಂಚಯ್ಯ ತಂದೆ : ಸಾಬಯ್ಯ	ಸಾ : ರಾಮಾಕ್ಯಾಂಪ್	2000–00

ಪ್ರವಾಸೋದ್ಯಮ ಇಲಾಖೆ ಯೋಜನೆಗಳು

538 (781) ಶ್ರೀ ನಂಜುಂಡಸ್ವಾಮಿ ಜಿ.ಎನ್. (ಕೊಳ್ಳೇಗಾಲ):– ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪ್ರವಾಸೋದ್ಯಮ ಇಲಾಖೆಯಿಂದ ಹೊಸ ಯೋಜನೆಗಳನ್ನು ರೂಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ ;

ಆ) ಹಾಗಿದ್ದಲ್ಲಿ, ಆ ಯೋಜನೆಗಳು ಯಾವುವು ;

ಇ) ಬಿಳಿಗಿರಿ ರಂಗನಬೆಟ್ಟ, ಗಗನಚುಕ್ಕಿ, ಭರಚುಕ್ಕಿಗಳ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಳ್ಳುವುದೆ ?

ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–

ಅ) ಹೌದು (Yes)

ಆ) ಈ ಕೆಳಕಂಡ ಹೊಸ ಯೋಜನೆಗಳನ್ನು ರೂಪಿಸಲು ಕ್ರಮ ಹಮ್ಮಿಕೊಳ್ಳಲಾಗಿದೆ.

1) ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ.

2) ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ.

3) ಹೆಲಿ ಟೂರಿಸಂ ಅಭಿವೃದ್ಧಿ.

4) ನೈಟ್ ಸಫಾರಿ/ಥೀಂ ಪಾರ್ಕ್ ಯೋಜನೆಗಳ ಅಭಿವೃದ್ಧಿ.

5) ಸಂಪರ್ಕ ರಸ್ತೆಗಳ ಅಭಿವೃದ್ಧಿ.

The proposed new schemes are as follows :

1) Integrated development of tourism centres.

2) Development of Eco-tourism

3) Development of Heli tourism

4) Development of Night Safari/Theme parks.

5) Development of link roads.

ಇ) 1) ಬಿಳಿಗಿರಿ ರಂಗನ ಬೆಟ್ಟದಲ್ಲಿ ಯಾತ್ರಿನಿವಾಸ ನಿರ್ಮಾಣ ಪ್ರಗತಿಯಲ್ಲಿದೆ.

2) ಗಗನ ಚುಕ್ಕಿಯಲ್ಲಿ ಶೌಚಾಲಯ ಸೌಲಭ್ಯ ಒದಗಿಸಲಾಗಿದೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

3) ಭರಚುಕ್ಕಿ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ಧನಸಹಾಯದಿಂದ ಯೋಜನೆಗಳನ್ನು ಕೈಗೊಳ್ಳಲಾಗಿದ್ದು ಅರಣ್ಯ ಇಲಾಖೆಯ ಮೂಲಕ ಜಾರಿಗೊಳಿಸಲಾಗುತ್ತಿದೆ. ಕಾಮಗಾರಿ ಪ್ರಗತಿಯಲ್ಲಿದೆ.

1) Construction of Yatrinivas has been taken up at Biligiri Rangana Betta and the work is under progress.

2) Toilet facilities have been provided at Gaganachukki and proposal has been submitted to Central Government requesting sanction for providing other facilities.

3) Infrastructure works have been taken up at Bharachukki area through Forest Department with the Central Financial Assistance. Work is under progress.